# ಭಾರತ ಕಮ್ಯೂನಿಸ್ಟ್ ಪಕ್ಷ (ಮಾವೋವಾದಿ)
## ರಾಜ್ಯ ಸಮಿತಿ ಕರ್ನಾಟಕ

ಮಾನ್ಯ ಸಂಪಾದಕರೆ, ಮಾಧ್ಯಮ ಪ್ರತಿನಿಧಿಗಳೆ ಶುಭಾಶಯಗಳು.

ಕರ್ನಾಟಕದ ಬಿ.ಜೆ.ಪಿ ಸರ್ಕಾರ ತರಲು ಹೊರಟಿರುವ ಕೋಕಾ ಕಾಯ್ದೆ ಕುರಿತು ನಮ್ಮ ಪ್ರತಿಕ್ರಿಯೆಯನ್ನು ಈ ಮೂಲಕ ನೀಡುತ್ತಿದ್ದೇವೆ. ತಾವುಗಳು ಇದನ್ನು ಪರಿಗಣಿಸಿ ಪ್ರಕಟಿಸಬೇಕೆಂದು ಕೋರುತ್ತಿದ್ದೇವೆ.

ಹೋರಾಟದಲ್ಲಿ ನಿಮ್ಮೊಂದಿಗೆ,

ಗಂಗಾಧರ್
ರಾಜ್ಯ ಸಮಿತಿ ಪರವಾಗಿ
12/05/2009 ಸಿಪಿಐ (ಮಾವೋವಾದಿ)
ಕರ್ನಾಟಕ

---

ಕರ್ನಾಟಕದ ಬಿಜೆಪಿ ಸರ್ಕಾರ ಕೋಕಾ ಕಾಯ್ದೆಯನ್ನು ಸುಗ್ರಿವಾಜ್ಞೆ ಮೂಲಕ ಜಾರಿಗೊಳಿಸಲು ಹೊರಟಿವೆ. ಈಗಾಗಲೇ ಪ್ರಜಾತಾಂತ್ರಿಕ ಅಭಿವ್ಯಕ್ತಿಗಳನ್ನು ಹತ್ತಿಕ್ಕಲಾಗುತ್ತಿದೆ. ಅನ್ಯಾಯ ಅಕ್ರಮಗಳನ್ನು ಶೋಷಣೆ ದೌರ್ಜನ್ಯಗಳನ್ನು ಪ್ರಶ್ನೆ ಮಾಡದಂತೆ ಪ್ರತ್ಯಕ್ಷ ಮತ್ತು ಪರೋಕ್ಷ ಬೆದರಿಕೆ ಒಡ್ಡಲಾಗುತ್ತಿದೆ. ಕನ್ನಡ ನಾಡಿನ ಸಂಪತ್ತು ಹಾಡುಹಗಲೇ ಲೂಟಿ ಮಾಡುತ್ತಿದ್ದರೂ ಆ ಬಗ್ಗೆ ಕೆಲವು ವಲಯಗಳಲ್ಲಿ ತೀವ್ರವಾಗಿ ಧ್ವನಿ ಎತ್ತಿದ್ದರೂ ಯಾವುದೇ ಎಗ್ಗಿಲ್ಲದೆ ಲೂಟಿ ಮುಂದುವರೆಯುತ್ತಿದೆ. ಜನರ ಧ್ವನಿ ಪ್ರತಿಭಟನೆಗಳನ್ನು ಪೊಲೀಸ್ ಬಲ ಹಾಗೂ ಬೆದರಿಕೆ ಕಿರುಕುಳಗಳ ಮೂಲಕ ಹತ್ತಿಕ್ಕಲಾಗುತ್ತಿದೆ. ಮಲೆನಾಡು ಕರಾವಳಿಗಳಲ್ಲಿನ ಜನರ ಮೇಲೆ ಫ್ಯಾಸಿಸ್ಟ್ ದಮನಕಾಂಡ ನಡೆಸಲಾಗುತ್ತಿದೆ. ಅಕ್ರಮ ಬಂಧನ, ಚಿತ್ರಹಿಂಸೆ, ಬೆದರಿಕೆ, ಸುಳ್ಳುಕೇಸು, ಕಿರುಕುಳ ಹೀಗೆ ಸಾಗುತ್ತಿದೆ. ಬರುವ ದಿನಗಳಲ್ಲಿ ಹೆಚ್ಚುತ್ತಿರುವ ಸಾಮಾಜಿಕ ಬಿಕ್ಕಟ್ಟು, ಆಳುವ ವರ್ಗಗಳು, ಸರ್ಕಾರ ಹಾಗೂ ರಾಜಕೀಯ ಪಕ್ಷಗಳ ಜನದ್ರೋಹಿತನಗಳ ಕಾರಣದಿಂದಾಗಿ ಜನರ ಪ್ರತಿರೋಧ ಹೋರಾಟಗಳು ಹೆಚ್ಚಾಗಲಿವೆ. ಅವುಗಳನ್ನೆಲ್ಲಾ ಹತ್ತಿಕ್ಕಲು

ನಿರಂಕುಶ ಕಾನೂನುಗಳನ್ನು ಜಾರಿಗೆ ತರಲಾಗುತ್ತಿದೆ. ಅಷ್ಟೇ ಅಲ್ಲದೆ ಜನಪರ, ಪ್ರಗತಿಪರ, ಪ್ರಜಾತಾಂತ್ರಿಕ ಶಕ್ತಿಗಳನ್ನು ಅಲ್ಪಸಂಖ್ಯಾತರು ಹಾಗೂ ರಾಜಕೀಯ ವಿರೋಧಿಗಳನ್ನು ಈ ಕಾನೂನುಗಳ ಮೂಲಕ ಗುರಿ ಮಾಡಲಾಗುತ್ತದೆ. ಈ ಹಿಂದಿನ ಟಾಡಾ ಕಾಯ್ದೆಯಡಿ ಈ ರೀತಿ ಸಾವಿರಾರು ಜನರನ್ನು ಗುರಿ ಮಾಡಲಾಗಿರುವುದನ್ನು ಇಲ್ಲಿ ನಾವು ಗಮನಿಸಬೇಕು. ಸರ್ಕಾರಗಳು ಹಾಲಿ ಜನಪರ ವೈದ್ಯ ಡಾ|| ಬಿನಾಯಕ್ ಸೇನ್‌ರಂತಹವರನ್ನು ಕ್ರೂರ ರೀತಿಯಲ್ಲಿ ಜೈಲಿನಲ್ಲಿ ಕೊಳೆಸಲಾಗುತ್ತಿದೆ ಎಂಬುದನ್ನು ಎಲ್ಲರೂ ಗಮನಿಸಬೇಕಾಗಿದೆ. ಈ ರೀತಿ ಹಲವಾರು ರಾಜ್ಯಗಳಲ್ಲಿ ಅಮಾಯಕರನ್ನು ನಿರಪರಾಧಿಗಳನ್ನು ಜೈಲಿನಲ್ಲಿ ಕೊಳೆಸಲಾಗುತ್ತಿದೆ. ಕೋಕಾದಂತಹ ಫ್ಯಾಸಿಸ್ಟ್ ಕಾಯಿದೆಗಳು ಅನ್ಯಾಯವಾಗಿ ಚಿತ್ರಹಿಂಸೆಗೀಡಾಗಿ ಜೈಲು ಪಾಲಾಗುವವರ ಸಂಖ್ಯೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಫ್ಯಾಸಿಸ್ಟ್ ಸರ್ಕಾರ ತನ್ನ ಹಿಂದೂ ಫ್ಯಾಸಿಸ್ಟ್ ಅಜೆಂಡಾಗಳನ್ನು ಜಾರಿಗೊಳಿಸಲಿಕ್ಕಾಗಿ ಕೋಕಾ ಕಾಯಿದೆಯನ್ನು ಬಳಸುತ್ತದೆ.

ನಾವು ಕೋಕಾ ಕಾಯ್ದೆಯ ಜಾರಿಯನ್ನು ತೀವ್ರವಾಗಿ ಖಂಡಿಸುತ್ತಿದ್ದೇವೆ.

ಜನವಿರೋಧಿ ಹಾಗೂ ಪ್ರಜಾತಂತ್ರ ವಿರೋಧಿ ಫ್ಯಾಸಿಸ್ಟ್ ಕೋಕಾ ಕಾಯ್ದೆಯ ಅನುಷ್ಠಾನವನ್ನು ನಾಡಿನ ಪ್ರಗತಿಪರರು, ನಾಡಪ್ರೇಮಿಗಳು, ಪ್ರಜಾತಂತ್ರವಾದಿಗಳು ತಡೆಯಬೇಕಾಗಿದೆ. ಅದರ ವಿರುದ್ಧ ಪ್ರಬಲ ದನಿಯನ್ನು ಎಬ್ಬಿಸಿ ಹೋರಾಡಬೇಕಾಗಿದೆ. ಇಲ್ಲದಿದ್ದಲ್ಲಿ ತಮ್ಮ ತಲೆ ಮೇಲೆ ಚಪ್ಪಡಿ ಬೀಳುವುದನ್ನು ನೋಡುತ್ತಾ ನಿಂತುಕೊಂಡಂತಾಗುತ್ತದೆ.

ಗಂಗಾಧರ್
ರಾಜ್ಯ ಸಮಿತಿ ಪರವಾಗಿ
12/05/2009 ಸಿಪಿಐ (ಮಾವೋವಾದಿ)
ಕರ್ನಾಟಕ